RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**


| ಭಾಗ- III<br>Part–III | ಬೆಂಗಳೂರು, ಶುಕ್ರವಾರ, ಏಪ್ರಿಲ್ ೨೨, ೨೦೧೬ (ವೈಶಾಖ ೨, ಶಕ ವರ್ಷ ೧೯೩೮)<br>Bengaluru, Friday, April 22, 2016 (Vaishaka 2, Shaka Varsha 1938) | ನಂ. ೬೬೬<br>No. 666 |
| --- | --- | --- |


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

**ಸಂಖ್ಯೆ: ಗ್ರಾಅಪ/57(18)/ಜಿಪಸ/2016, ಬೆಂಗಳೂರು, ದಿನಾಂಕ: 21/04/2016**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 138(2)ರಲ್ಲಿ ಮತ್ತು ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿ) ನಿಯಮಗಳು, 2005 ಮತ್ತು (ತಿದ್ದುಪಡಿ) ನಿಯಮಗಳು, 2016 ರಲ್ಲಿ ನಿಗಧಿಪಡಿಸಿದಂತೆ, ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮಾರ್ಚ್ 2016 ರಲ್ಲಿ ರಚಿತವಾಗಿರುವ ತಾಲ್ಲೂಕು ಪಂಚಾಯತಿಗಳ ಐದು ವರ್ಷಗಳ ಅವಧಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿಯನ್ನು ನಿಗಧಿಗೊಳಿಸಬೇಕಾಗಿದ್ದು, ಅದರಂತೆ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳಲ್ಲಿ ಅನುಸೂಚಿತ ಪಂಗಡ/ಅನುಸೂಚಿತ ಜಾತಿ/ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಹಾಗೂ ಅದರೊಂದಿಗೆ ಮೀಸಲಿರಿಸದವರಿಗೆ ಹಂಚಿಕೆಯಾದ ಹುದ್ದೆಗಳ ವಿವರಗಳನ್ನು ದಿನಾಂಕ:11–04–2016ರಂದು ಇದೇ ಸಮಸಂಖ್ಯೆಯ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿತ್ತು ಹಾಗೂ ಮೀಸಲಾತಿ ವಿವರಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಮತ್ತು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು.

ವಿವಿಧ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಸಾರ್ವಜನಿಕರು ಸಲ್ಲಿಸಿದ ಆಕ್ಷೇಪಣೆ/ಮನವಿಗಳನ್ನು ಸರ್ಕಾರವು ನಿಯಮಾನುಸಾರ ಪರಿಶೀಲಿಸಿರುತ್ತದೆ. ಅದರಂತೆ, ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ಅನುಸೂಚಿತ ಪಂಗಡ/ಅನುಸೂಚಿತ ಜಾತಿ/ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಹಾಗೂ ಅದರೊಂದಿಗೆ ಮೀಸಲಿರಿಸದವರಿಗೆ ಹಂಚಿಕೆಯಾದ ಹುದ್ದೆಗಳ ವಿವರಗಳನ್ನು ಅನುಸೂಚಿತ ಪಂಗಡ/ಅನುಸೂಚಿತ ಜಾತಿ/ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಹಾಗೂ ಅದರೊಂದಿಗೆ ಮೀಸಲಿರಿಸದವರಿಗೆ ಹಂಚಿಕೆಯಾದ ಹುದ್ದೆಗಳ ವಿವರಗಳನ್ನು ಹಾವೇರಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ತಾಲ್ಲೂಕು ಪಂಚಾಯತಿಗಳಿಗೆ ಈ ಕೆಳಕಂಡಂತೆ ನಿರ್ದಿಷ್ಟಪಡಿಸಲಾಗಿದೆ.

| ಕ್ರಸಂ | ಜಿಲ್ಲಾ ಪಂಚಾಯತಿ ಹೆಸರು | ತಾಲ್ಲೂಕು ಪಂಚಾಯತಿ ಹೆಸರು | ಅಧ್ಯಕ್ಷ ಸ್ಥಾನದ ಮೀಸಲಾತಿ | ಉಪಾಧ್ಯಕ್ಷ ಸ್ಥಾನದ ಮೀಸಲಾತಿ |
|---|---|---|---|---|
| 1. | ಹಾವೇರಿ | ಬ್ಯಾಡಗಿ | ಪರಿಶಿಷ್ಟ ಜಾತಿ (ಮ) | ಹಿಂದುಳಿದ ವರ್ಗ(ಬ) (ಮ) |
| 2. | | ಹಿರೇಕೆರೂರು | ಸಾಮಾನ್ಯ | ಹಿಂದುಳಿದ ವರ್ಗ (ಅ) |
| 3. | | ಹಾನಗಲ್ | ಸಾಮಾನ್ಯ | ಸಾಮಾನ್ಯ (ಮ) |
| 4. | | ಹಾವೇರಿ | ಹಿಂದುಳಿದ ವರ್ಗ(ಅ) | ಸಾಮಾನ್ಯ (ಮ) |
| 5. | | ರಾಣೇಬೆನ್ನೂರು | ಪರಿಶಿಷ್ಟ ಜಾತಿ | ಸಾಮಾನ್ಯ (ಮ) |
| 6. | | ಸವಣೂರು | ಸಾಮಾನ್ಯ | ಸಾಮಾನ್ಯ (ಮ) |
| 7. | | ಶಿಗ್ಗಾಂವ್ | ಹಿಂದುಳಿದ ವರ್ಗ(ಅ) (ಮ) | ಸಾಮಾನ್ಯ (ಮ) |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಬಿ.ಧೋತ್ರೆ
ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) 100 ಪ್ರತಿಗಳು